ಇ) ಇನ್ನೂ ನಿರ್ಧರಿಸಿರುವುದಿಲ್ಲ.

ಈ) ಬೀದರ್ ಜಿಲ್ಲೆಯಲ್ಲಿ ಹಾಲಿ 34 ಪಶುಚಿಕಿತ್ಸಾಲಯಗಳಿವೆ.

1992-93ನೇ ಸಾಲಿಗೆ ಪ್ರಾರಂಭಿಸಲಿರುವ ಆಸ್ಪತ್ರೆಗಳ ಬಗ್ಗೆ ಇನ್ನೂ ತೀರ್ಮಾನ ತೆಗೆದುಕೊಂಡಿರುವುದಿಲ್ಲ.

ಬೀದರ್ ಜಿಲ್ಲೆಯಲ್ಲಿ ತೀವ್ರ ಬರಗಾಲ

550 (685) ಶ್ರೀ ಬಸವರಾಜು ಪಾಟೀಲ್, ಅಟ್ಟೂರು:- (ಬಸವಕಲ್ಯಾಣ) ಮಾನ್ಯ ಕಂದಾಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ?

ಅ) ಬೀದರ್ ಜಿಲ್ಲೆಯಲ್ಲಿ ತೀವ್ರ ಬರಗಾಲ ಉಂಟಾಗಿರುವುದು ನಿಜವೇ?

ಆ) ಹಾಗಿದ್ದಲ್ಲಿ, ಬರ ಪರಿಹಾರಕ್ಕಾಗಿ ಕಾಮಗಾರಿಗಳನ್ನು ಕೈಗೊಳ್ಳಲು ಬಿಡುಗಡೆ ಮಾಡಿರುವ ಮೊತ್ತವೆಷ್ಟು?

ಇ) ಬೀದರ್ ಜಿಲ್ಲೆಯನ್ನು ಬರ ಪೀಡಿತವೆಂದು ಘೋಷಿಸಲಾಗಿದೆಯೇ?

ಈ) ಜಿಲ್ಲೆಯಲ್ಲಿ ಕುಡಿಯುವ ನೀರಿನ ಪೂರೈಕೆಗೆ ಕೈಗೊಂಡಿರುವ ಕ್ರಮಗಳೇನು?

ಉ) ಬರ ಪರಿಹಾರ ಕಾಮಗಾರಿಗಳನ್ನು ಕೈಗೊಳ್ಳಲಾಗಿದೆಯೇ?

ಊ) ಹಾಗಿದ್ದಲ್ಲಿ, ಕಾಮಗಾರಿಗಳನ್ನು (ತಾಲ್ಲೂಕುವಾರು ವಿವರಗಳನ್ನು ಒದಗಿಸುವುದು)

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ:- (ಕಂದಾಯ ಸಚಿವರು)

ಅ) ಹೌದು, ಜಿಲ್ಲೆಯ ಒಟ್ಟು 623 ಹಳ್ಳಿಗಳ ಪೈಕಿ 208 ಹಳ್ಳಿಗಳಲ್ಲಿ ತೀವ್ರ ಬರಗಾಲ ಉಂಟಾಗಿದೆ.

ಆ) 222-00 ಲಕ್ಷ ರೂಪಾಯಿಗಳು

ಇ) -ಇಲ್ಲ-

ಈ) 104 ಕೊಳವೆ ಬಾವಿಗಳಿಗೆ ಹಾಗೂ 26 ಕುಡಿಯುವ ನೀರು ಸರಬರಾಜು ಯೋಜನೆಗಳಿಗೆ ಅಭಾವ ಪರಿಹಾರದಡಿ ಹಣ ಮಂಜೂರಾತಿ ನೀಡಿದೆ.

ಉ) -ಹೌದು-

ಊ)	ತಾಲ್ಲೂಕುಗಳು	ಕೊಳವೆ ಬಾವಿ	ನೀರು ಸರಬರಾಜು ಯೋಜನೆಗಳು
1)	ಔರಾದ್	39	13
2)	ಬಾಲ್ಕಿ	10	-
3)	ಬಸವಕಲ್ಯಾಣ	24	9
4)	ಬೀದರ್	18	3
5)	ಹುಮನಾಬಾದ್	13	1
	ಒಟ್ಟು	104	26

ಇದಲ್ಲದೆ 29 ತೆರೆದ ಬಾವಿಗಳ ಹೂಳೆತ್ತುವ ಕಾರ್ಯವನ್ನು ಮತ್ತು ಒಟ್ಟು 64.17 ಲಕ್ಷ ರೂ.ಗಳ ವಿವಿಧ ಕಾರ್ಯಗಳಿಗೆ ಮಂಜೂರಾತಿ ನೀಡಿ ಸೂಕ್ತ ಪರಿಹಾರ ನೀಡುವ ಕಾರ್ಯಕ್ರಮ ಹಾಕಿಕೊಳ್ಳಲಾಗಿದೆ.